ಶ್ರೀ ಹೆಚ್.ಕೆ ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸುವರ್ಣ ಗ್ರಾಮೋದಯ ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು 2013–14ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಗಾಅಪ/241/ಎಎಫ್ಎನ್/2013 ದಿ· 01.08.2013 ಮುಂದುವರೆಸಿ ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಅಭಿವೃದ್ಧಿ ಕಾಮಗಾರಿ ಯಗಳನ್ನು ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ

ಆ) 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ₹ 537.00 ಲಕ್ಷ ಮೊತ್ತದಲ್ಲಿ ಮಂಜೂರಾಗಿದ್ದ 17 ಗ್ರಾಮಗಳಲ್ಲಿ ₹ 341.10 ಲಕ್ಷಗಳ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವನ್ನು 2013–14 ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ

ಸಣ್ಣ ನೀರಾವರಿ ಕೆರೆ ಕುಂಟೆಗಳ ಅಭಿವೃದ್ಧಿ

392(617); ಶ್ರೀ ರಮೇಶ್ ಕುಮಾರ್ ಕೆ.ಆರ್ (ಶ್ರೀನಿವಾಸಪುರ)

ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್ ಮತ್ತು ಇನ್ನಿತರೆ ಪಂಚಾಯತ್ ರಾಜ್ ಸಂಸ್ಥೆಗಳ ಅಧೀನದಲ್ಲಿ ಬರುವ ಸಣ್ಣ ನೀರಾವರಿ ಆಧಾರಿತ ಕೆರೆ ಕುಂಟೆಗಳ ಸಂಖ್ಯೆ ಎಷ್ಟು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಕೆರೆ ಕುಂಟೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆ ಕುಂಟೆಗಳ ಪುನಶ್ಚೇತನಕ್ಕೆ ಸರ್ಕಾರ ಯಾವುದಾದರೂ ನಿರ್ದಿಷ್ಟ ಯೋಜನೆಯನ್ನು ರೂಪಿಸಿದೆಯೇ,

ಇ) ಹಾಗಿದ್ದಲ್ಲಿ ಅದಕ್ಕಾಗಿ ಮೀಸಲಿಟ್ಟಿರುವ ಹಣ ಎಷ್ಟು;

ಈ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಬರುವಂತಹ ಕೆರೆ ಕುಂಟೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ತರುವ ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್.ಕೆ ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ಮತ್ತು ಇನ್ನಿತರೆ ಪಂಚಾಯತ್ ರಾಜ್ ಸಂಸ್ಥೆಗಳ ಅಧೀನದಲ್ಲಿ ಬರುವ ಸಣ್ಣ ನೀರಾವರಿ ಆಧಾರಿತ 40 ಹೆಕ್ಟೇರ್ ಗಿಂತಲೂ ಕಡಿಮೆ ಅಚ್ಚುಕಟ್ಟು ಇರುವ ಒಟ್ಟು 33.374 ಕೆರೆ ಕುಂಟೆಗಳು ಇರುತ್ತವೆ

ಕೋಲಾರ ಜಿಲ್ಲೆಯಲ್ಲಿ ಇರುವ ಒಟ್ಟು ಜಿಲ್ಲಾ ಪಂಚಾಯತ್ ಕೆರೆಗಳ ಸಂಖ್ಯೆ – 2 301 ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಜಿಲ್ಲಾ ಪಂಚಾಯತ್ ಕೆರೆಗಳ ಸಂಖ್ಯೆ 1649 ಇರುತ್ತದೆ

ಆ) ಈ ಕೆರೆ ಕುಂಟೆಗಳ ಪುನಶ್ಚೇತನಕ್ಕೆ ರೂಪಿಸಿರುವ ಯೋಜನೆಗಳ ವಿವರಗಳು ಕೆಳಕಂಡಂತಿದೆ.

1 ಜಿಲ್ಲಾ ಪಂಚಾಯತ್ ಕೆರೆಗಳ ಪೂರ್ವಸ್ಥಿತಿ ಮತ್ತು ಪುನಃಶ್ಚೇತನ – ವಿಶೇಷ ಅಭಿವೃದ್ಧಿ ಯೋಜನೆ.

2 ಕೆರೆಗಳ ಪುನರುಜ್ಜೀವನ.

3. **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS)**ಅಡಿ 12000 ಕೆರೆಗಳ ಪುನಶ್ಚೇತನ ಕಾರ್ಯಕ್ರಮ (ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ '2' ಕೆರೆಗಳಂತೆ)

ಇ) ಪ್ರಸ್ತುತ 2013–14ನೇ ಸಾಲಿಗೆ ಆಯವ್ಯಯದಲ್ಲಿ ಒದಗಿಸಿದ ಯೋಜನಾವಾರು ಅನುದಾನದ ವಿವರ ಕೆಳಕಂಡಂತಿದೆ

1 ಜಿಲ್ಲಾ ಪಂಚಾಯತ್ ಕೆರೆಗಳ ಪೂರ್ವಸ್ಥಿತಿ ಮತ್ತು ಪುನಃಶ್ಚೇತನ – ವಿಶೇಷ ಆರ್ಥಿಕ ಕಾರ್ಯಕ್ರಮ–25.00 ಕೋಟಿ.

2. ಕೆರೆಗಳ ದುಸರಸ್ತಿ ಮತ್ತು ಪುನಶ್ಚೇತನ–42 80 ಕೋಟಿ

3 MGNREGS ಯೋಜನೆಯಡಿ ಅಗತ್ಯತೆಗೆ ತಕ್ಕಂತೆ ಅನುದಾನ ಲಭ್ಯವಿರುತ್ತದೆ

ಈ) ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ